# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಹಾಯಕ ಕಾರ್ಯಪಾಲಕ ಅಭಿಯಂತರರ ಕಛೇರಿ ಕಟ್ಟಡ ಜಯಂತಿ ನಗರ ವೃತ್ತ ಹೊರಮಾವು/ಕಲ್ಕೆರೆ ಮುಖ್ಯರಸ್ತೆ, ಹೊರಮಾವು ಗ್ರಾಮ, ಬೆಂಗಳೂರು- 560113

ಸಂಖ್ಯೆ.ಬಿಬಿಎಂಪಿ/ಸ.ಕಾ.ಅ/ಹೊಉವಿ/ಪಿಆರ್/ 08/2020-21 ದಿನಾಂಕ: 16.01.2021

*ಮಾನ್ಯ ಆಯುಕ್ತರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂಖ್ಯೆ:ಬಿ12(5)ಪಿಆರ್/35/ 2020-21 ದಿನಾಂಕ:21/09/2020 ಹಾಗೂ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರು ದಿನಾಂಕ:-16.01.2021 ರಂದು ಹೊರಮಾವು ಉಪವಿಭಾಗದ ವಾರ್ಡ್-25 ರ ಕಛೇರಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿದ್ದು, ಸಭೆಯ ನಡವಳಿಗಳು ಈ ಕೆಳಕಂಡಂತಿರುತ್ತದೆ.*

ಉಪಸ್ಥಿತರು:

| ಕ್ರ.ಸಂ | ಹೆಸರು | ಹುದ್ದೆ | ಮೊಬೈಲ್ ಸಂಖ್ಯೆ |
|---|---|---|---|
| | | ಅಧಿಕಾರಿಗಳು | |
| 1 | ಶ್ರೀಮತಿ.ಸರೋಜಾದೇವಿ | ನೋಡಲ್ ಅಧಿಕಾರಿ ವಾ.ನಂ.25 ಹಾಗೂ ಉಪ ಆಯುಕ್ತರು (ಮಹದೇವಪುರ) | 9480684059 |
| 2 | ಶ್ರೀಮತಿ.ಜ್ಯೋತಿಲಕ್ಷ್ಮಿ | ಸ.ಕಂ.ಅ ಹೊರಮಾವು | 9108201798 |
| 4 | ಶ್ರೀ.ರಮೇಶ್ | ಜೆ.ಇ ಹೊರಮಾವು ವಾರ್ಡ್-25 | 9739838297 |
| 5 | ಶ್ರೀ.ಚಂದ್ರಶೇಖರ್.ಎ.ಜಿ | ಸಹಾಯಕ ಕಾರ್ಯಪಾಲಕ ಅಭಿಯಂತರರು (ಹೊರಮಾವು) | 9844587466 |
| 6 | ಶ್ರೀ.ಕೋದಂಡ | ಬೀದಿ ದೀಪ ನಿರ್ವಹಣೆ ಗುತ್ತಿಗೆದಾರರು | |
| 7 | ಶ್ರೀ.ಆದರ್ಶ್ | BWSSB (AE) | 9632422553 |
| 8 | ಶ್ರೀ.ವಿಶ್ವನಾಥ.ಎಸ್.ಎಲ್ & ಶ್ರೀ.ಶ್ರೀನಿವಾಸ್ ಮೂರ್ತಿ | BESCOM (AE) & (JE) | 9449874210<br>9449909942 |
| 9 | ಶ್ರೀ.ಪ್ರಕಾಶ್ & ವಿಜಯಕುಮಾರ್ | H C 1054-Ramamurthy nagara Police Station | |
| 10 | ಶ್ರೀ.ಆರ್ಮುಗಂ, ಸರ್.ಎಂ.ವಿ ನಗರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ | - | - |
| 11 | ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ | | |
| 12 | ಶ್ರೀ.ಕೃಷ್ಣಪ್ಪ, ಬಂಜಾರ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ | | |
| 13 | ಶ್ರೀ.ಚಂದ್ರಶೇಖರ್ ಕಾರ್ಯದರ್ಶಿ, ವಿಜಯ ಬ್ಯಾಂಕ್ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ:- | - | - |
| 14 | ಶ್ರೀಮತಿ.ಸುಭಾಷಿಣಿ, ಫರ್ನ್ಸ್ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ- | - | - |
| 15 | ಶ್ರೀಮತಿ.ರಾಜೇಶ್ವರಿ.ಡಿ, ಬಿ-ಪ್ಯಾಕ್ ಸಿವಿಲ್ ಲೀಡರ್, ಕೆ.ಆರ್.ಪುರಂ:- | - | - |

ಮು.ತಿ.ನೋ

Scanned with CamScanner

ಮಾನ್ಯ ನೋಡಲ್ ಅಧಿಕಾರಿ/ಉಪ ಆಯುಕ್ತರು (ಮಹದೇವಪುರ) ರವರ ಸಮ್ಮುಖದಲ್ಲಿ ಸಭೆಗೆ ಹಾಜರಾದ ಎಲ್ಲಾ ಇಲಾಖೆಯ ಅಧಿಕಾರಿ/ಸಿಬ್ಬಂದಿ ಇತರೆ ಸಂಘ ಸಂಸ್ಥೆಗಳು ಸಾರ್ವಜನಿಕರಿಗೆ ಸುಸ್ವಾಗತ ಕೋರುತ್ತಾ, ಬಿಬಿಎಂಪಿ ವಾರ್ಡ್ ನಂ.25 ರ ವ್ಯಾಪ್ತಿಯಲ್ಲಿ ಅಭಿವೃದ್ಧಿ ಕಾರ್ಯ, ಮೂಲಭೂತ ಸೌಕರ್ಯಗಳಾದ ಘನತ್ಯಾಜ್ಯ ವಸ್ತುಗಳ ನಿರ್ವಹಣೆ, ಸಾರ್ವಜನಿಕ ಆರೋಗ್ಯ, ನಗರದ ಸ್ವಚ್ಛತೆ, ರಸ್ತೆ ನಿರ್ವಹಣೆ, ಬೃಹತ್ ನೀರುಗಾಲುವೆಗಳ ನಿರ್ವಹಣೆ, ಬೀದಿ ದೀಪಗಳ ನಿರ್ವಹಣೆ, ಕಲ್ಯಾಣ ಕಾರ್ಯಕ್ರಮಗಳು, 110 ಹಳ್ಳಿಗಳ ವ್ಯಾಪ್ತಿಯಲ್ಲಿ ಬಿಡಬ್ಲ್ಯೂಎಸ್ಎಸ್‌ಬಿ ರವರು ಕೊಳವೆ ಸಾಲುಗಳ ಅಳವಡಿಸುತ್ತಿರುವ ಸಂಬಂಧ ಹಾಗೂ ಸಾರ್ವಜನಿಕರ ಸಮಸ್ಯೆ ಕುಂದುಕೊರತೆಗಳನ್ನು ಬಗೆಹರಿಸುವಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ಸಂಬಂಧಪಟ್ಟ ಎಲ್ಲಾ ಇಲಾಖೆಯ ಅಧಿಕಾರಿ ಹಾಗೂ ಸಾರ್ವಜನಿಕರಿಗೆ ಸುಸ್ವಾಗತ ಕೋರಿ ಸಭೆಯನ್ನು ಆರಂಭಿಸಿದರು.

ವಾರ್ಡ್ ಸಮಸ್ಯೆಗಳ ಬಗ್ಗೆ ಚರ್ಚೆ:-

ಶ್ರೀ.ಆರ್ಮುಗಂ, ದಾಮೋದರನ್ ಮತ್ತು ಶ್ರೀ.ನಂಜಪ್ಪ ಸರ್.ಎಂ.ವಿ ನಗರ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್:- ರವರು ಮಾತನಾಡಿ ಸರ್.ಎಂ.ವಿ ನಗರ 8ನೇ ಮುಖ್ಯರಸ್ತೆ ಮತ್ತು ಅಡ್ಡರಸ್ತೆಗಳು ಡಾಂಬರೀಕರಣ ಆಗದಿರುವ ಬಗ್ಗೆ ಹಾಗೂ ಗುತ್ತಿಗೆದಾರರಾದ ಶ್ರೀ.ವಸಂತ್‌ಕುಮಾರ್ ರವರಿಗೆ ನೋಟೀಸ್ ಜಾರಿಮಾಡಿ ಡಾಂಬರೀಕರಣ ಮಾಡಲು ಅಧಿಕಾರಿಗಳು ಕ್ರಮಕೈಗೊಳ್ಳಲು ಮತ್ತೊಮ್ಮೆ ಕೋರಿರುತ್ತಾರೆ. ಹಾಗೂ ಸದ್ಯಕ್ಕೆ ಗುಂಡಿಗಳನ್ನು ಮುಚ್ಚಿಕೊಡಲು ಕೋರಿರುತ್ತಾರೆ. ಹಾಗೂ ಬೆಂಗಳೂರು ಜಲಮಂಡಳಿ ವತಿಯಿಂದ ಕೆಲವು ರಸ್ತೆಗಳಿಗೆ ಸಮರ್ಪಕವಾಗಿ ನೀರು ಸರಬರಾಜು ಆಗದಿರುವ ಬಗ್ಗೆ ಕೋರಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ವಾರ್ಡ್ ಸಂಖ್ಯೆ-26 ಮತ್ತು ಸಹಾಯಕ ಅಭಿಯಂತರರು, ಬೆಂಗಳೂರು ಜಲ ಮಂಡಳಿ ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀ.ಟೋನಿಸ್ವಾಮಿ ಸಾಯಿ ಬಡಾವಣೆ:- ರವರು ಮಾತನಾಡಿ ಸಾಯಿಬಾಬ ಬಡಾವಣೆ, ಗೆದ್ದಲಹಳ್ಳಿ ರೈಲ್ವೇ ಸೇತುವೆಯ ಅಗಲೀಕರಣ ಮಾಡಲು ರೂ.18.00 ಕೋಟಿಗಳನ್ನು ರೈಲ್ವೇ ಇಲಾಖೆಗೆ ಡೆಪಾಸಿಟ್ ಮಾಡಲು ಮತ್ತು ರಾಜಕಾಲುವೆ ತಡೆಗೋಡೆ ನಿರ್ಮಿಸಲು ಕ್ರಮ ವಹಿಸಿರುವ ಬಗ್ಗೆ ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೃಹತ್ ನೀರುಗಾಲುವೆ ವಿಭಾಗ ರವರು ಕ್ರಮವಹಿಸಲು ಸಭೆಯು ಸೂಚಿಸಲಾಯಿತು.

ಶ್ರೀ.ಕೃಷ್ಣಪ್ಪ, ಪ್ರಸಾದ್ ಲಕ್ಷ್ಮಣ್ / ಶ್ರೀಮತಿ ಸಿಂಧು ಬಂಜಾರ/ ಕನಕಗಿರಿ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ:- ರವರು ಮಾತನಾಡಿ ಬಂಜಾರ ಬಡಾವಣೆಯಲ್ಲಿ ಅಲ್ಲಲ್ಲಿ ನೀರು ಸರಬರಾಜು ಕೊಳವೆಸಾಲುಗಳು ಸುಮಾರು 2.00ಕಿ.ಮೀ ಉದ್ದಕ್ಕೆ ಹಾಳಾಗಿದ್ದು, ಇವುಗಳನ್ನು ಬದಲಾಯಿಸಿ ಅಗತ್ಯ ಕ್ರಮವಹಿಸಲು ಹಾಗೂ ಶೂಟಿಂಗ್ ಬಿಲ್ಡಿಂಗ್ ಕನಕಗಿರಿ ಆಜು-ಬಾಜು ಹಾಗೂ ಬಂಜಾರ ಮುಖ್ಯರಸ್ತೆ- ಹೊರಮಾವು ಮುಖ್ಯರಸ್ತೆಯಿಂದ ಹೊರಮಾವು ಅಗರ ಕೆರೆ ರಸ್ತೆ ಮುಖಾಂತರ ವಿಜಯಲಕ್ಷ್ಮಿ ಬಡಾವಣೆ ಹೆಚ್.ಟಿ.ಲೈನ್ ರಸ್ತೆವರೆಗೆ ರಸ್ತೆಗಳಲ್ಲಿ ಬಿ.ಡಬ್ಲ್ಯೂ.ಎಸ್.ಎಸ್.ಬಿ ವತಿಯಿಂದ ಕಾವೇರಿ ಮತ್ತು ಒಳಚರಂಡಿ ಕೊಳವೆಸಾಲನ್ನು ಅಳವಡಿಸಲು ರಸ್ತೆಗಳನ್ನು ಅಗೆದಿದ್ದು, ಈ ರಸ್ತೆಗಳ ಅಭಿವೃದ್ಧಿ ಪಡಿಸಿ ಡಾಂಬರೀಕರಣ ಮಾಡಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಅಭಿಯಂತರರು, ಹೊರಮಾವು ಉಪ-ವಿಭಾಗ ರವರು ಕೂಡಲೇ ಕ್ರಮವಹಿಸಲು ಸಭೆಯು ಸೂಚಿಸಿತು.

ಶ್ರೀ.ಚಂದ್ರಶೇಖರ್ ಕಾರ್ಯದರ್ಶಿ, ವಿಜಯ ಬ್ಯಾಂಕ್ ರೆಸಿಡೆನ್ಶಿಯಲ್ ವೆಲ್‌ಫೇರ್ ಅಸೋಸಿಯೇಷನ್ ಹೊರಮಾವು ಅಗರ:- ರವರು ಮಾತನಾಡಿ ಬೆಂಗಳೂರು ಜಲಮಂಡಳಿ ವತಿಯಿಂದ ಸರ್ವಿಸ್ ಛೇಂಬರ್‌ಗಳನ್ನು ಅಳವಡಿಸುತ್ತಿದ್ದು, ಮುಂದೆ ಇವುಗಳ ಉಪಯೋಗ ಇರುವುದಿಲ್ಲ. ಇವುಗಳನ್ನು ಇನ್ನುಮುಂದೆ ಅಳವಡಿಸದಿರಲು ಹಾಗೂ ಹೊರಮಾವು ಬಿ.ಬಿ.ಎಂ.ಪಿ ಕಛೇರಿ ಬಳಿ ಮಾರ್ಷಲ್‌ಗಳು ಮಾಸ್ಕ್ ಧರಿಸದಿರುವ ನೆಪದಲ್ಲಿ ಎಲ್ಲಾ ದ್ವಿಚಕ್ರ ವಾಹನಗಳನ್ನು ತಡೆಯುತ್ತಿದ್ದು, ಇದರಿಂದ ಅಪಘಾತಗಳು ಸಂಭವಿಸುತ್ತಿದ್ದು, ಸಾರ್ವಜನಿಕರಿಗೂ ತೊಂದರೆಯುಂಟಾಗುತ್ತಿದ್ದು, ಇದನ್ನು ಸ್ಥಗಿತಗೊಳಿಸಲು ಸಂಬಂಧಪಟ್ಟವರಿಗೆ ಕ್ರಮವಹಿಸಲು ಸೂಚಿಸಲು ಕೋರಿಕೊಂಡಿರುತ್ತಾರೆ.

ಕ್ರಮ:- ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿಡಬ್ಲ್ಯೂ.ಎಸ್.ಎಸ್.ಬಿ ಮುಂದಿನ ಸಭೆಯಲ್ಲಿ ಸರ್ವಿಸ್ ಛೇಂಬರ್‌ಗಳ ಬಗ್ಗೆ ಮಾಹಿತಿ ಒದಗಿಸಲು ಹಾಗೂ ಮಾಸ್ಕ್ ಅಭಿಯಾನದ ಕುರಿತು ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮ ವಹಿಸಲು ಸಭೆಯು ಸೂಚಿಸಿತು.

ಮು.ತಿ.ನೋ

Scanned with CamScanner

<u>ಶ್ರೀಮತಿ.ಸುಭಾಷಿಣಿ, ಫರ್ನ್ಸ್ ರೆಸಿಡೆನ್ಷಿಯಲ್ ವೆಲ್‌ಫೇರ್ ಅಸೋಸಿಯೇಷನ್ ಕೆ.ನಾರಾಯಣಪುರ –</u> ರವರು ಮಾತನಾಡಿ ನವ ಜ್ಯೋತಿ ರಸ್ತೆ(ಪರ್ನ್ಸ ರಸ್ತೆ) ಡಾಂಬರೀಕರಣ ಆಗದಿರುವ ಬಗ್ಗೆ ಹಲವಾರು ಬಾರಿ ತಿಳಿಸಿದರೂ ಡಾಂಬರೀಕರಣವನ್ನು ಪಾಲಿಕೆ ವತಿಯಿಂದ ಇದುವರೆವಿಗೂ ಮಾಡಿರುವುದಿಲ್ಲ. ಆದುದರಿಂದ ಗುತ್ತಿಗೆದಾರರ ವಿರುದ್ಧ ನೋಟೀಸ್‌ನೀಡಿ ಅವರನ್ನು ಕಪ್ಪುಪಟ್ಟಿಗೆ ಸೇರಿಸಿ ಬೇರೆ ಗುತ್ತಿಗೆದಾರರಿಂದ ಡಾಂಬರೀಕರಣ ಮಾಡಿಸಲು ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿರುತ್ತಾರೆ.

<u>ಕ್ರಮ:–</u> ಸಹಾಯಕ ಕಾರ್ಯಪಾಲಕ ಅಭಿಯಂತರರು, ಹಾಗೂ ಸಹಾಯಕ ಅಭಿಯಂತರರು, ಹೊರಮಾವು ರವರು ಮಾತನಾಡಿ ದಿನಾಂಕ: 30.01.2021 ರ ಒಳಗೆ ಡಾಂಬರೀಕರಣ ಮಾಡಲು ಕ್ರಮ ವಹಿಸಲಾಗುವುದು ಎಂದು ಸಭೆಗೆ ತಿಳಿಸಿರುತ್ತಾರೆ.

<u>ಶ್ರೀಮತಿ.ರಾಜೇಶ್ವರಿ.ಡಿ, ಬಿ–ಪ್ಯಾಕ್ ಸಿವಿಲ್ ಲೀಡರ್, ಕೆ.ಆರ್.ಪುರಂ:–</u> ರವರು ಮಾತನಾಡಿ ಹೊರವರ್ತುಲ ರಸ್ತೆಯ ಎ.ಎಸ್.ಆರ್ ಕನ್‌ವೆನ್ಷನ್ ಹಾಲ್ ಮುಂಭಾಗದಿಂದ ರಾಮಮೂರ್ತಿನಗರ ಸಿಗ್ನಲ್ ವರೆಗೆ ಹೊರವರ್ತುಲ ರಸ್ತೆಯಲ್ಲಿ ವಾಹನಗಳನ್ನು ನಿಲ್ಲಿಸುತ್ತಿದ್ದು, ಇದನ್ನು ಸ್ಥಗಿತಗೊಳಿಸುವ ಬಗ್ಗೆ ಸಂಬಂಧಿಸಿದ ಸಂಚಾರ ವಿಭಾಗದ ಪೋಲೀಸ್ ಠಾಣೆ ರವರನ್ನು ಕೋರಲು ಕೋರಿಕೊಂಡಿರುತ್ತಾರೆ.

<u>ಕ್ರಮ:–</u> ಪೋಲೀಸ್ ಇನ್ಸಪೆಕ್ಟರ್ ಸಂಚಾರ ವಿಭಾಗ, ಕೆ.ಆರ್.ಪುರ ರವರು ಸೂಕ್ತ ಕ್ರಮ ವಹಿಸಲು, ಪತ್ರ ಬರೆಯಲು ಸಭೆಯು ಸೂಚಿಸಿತು.

ಸಭೆಯನ್ನು ಮುಕ್ತಾಯಗೊಳಿಸುವ ಸಲುವಾಗಿ ಕೊನೆಯದಾಗಿ ಸ.ಕಾ.ಅ ಹೊರಮಾವು ಉಪ–ವಿಭಾಗ ರವರು ಸಭೆಯಲ್ಲಿ ನುರಿತ ಸಲಹೆ ಸೂಚನೆಗಳನ್ನು ಚರ್ಚಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ, ವಾರ್ಡ್‌ನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ ಬಗ್ಗೆ ವಾರ್ಡ್ ಮಟ್ಟದಲ್ಲಿ ಕಾರ್ಯಯೋಜನೆಯನ್ನು ರೂಪಿಸಿಕೊಂಡು ಕ್ರಮವಹಿಸುವುದಾಗಿ ತಿಳಿಸುತ್ತಾ, ವಂದನೆಗಳೊಂದಿಗೆ ನೋಡಲ್ ಅಧಿಕಾರಿಗಳ ಅಪ್ಪಣೆ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ನೋಡಲ್ ಅಧಿಕಾರಿ ವಾರ್ಡ್ ನಂ.25
ಹಾಗೂ ಉಪ ಆಯುಕ್ತರು
(ಮಹದೇವಪುರ) ವಲಯ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಿರಿಯ ಅಭಿಯಂತರರು
ಹೊರಮಾವು ವಾರ್ಡ್‌ನಂ.25
ಬಿ.ಬಿ.ಎಂ.ಪಿ

Scanned with CamScanner